1 Notification No FTD 243 TMT 86 dated 18-7-1986
Grant of exemption fron. payment of Motor Vehicles Tax in respect of vehicles owned by the Center for Special Education, Bangalore.

2. Notifcation No.FTD 399 TMT 85, dated 17th july 1986
Grant of exemption from payment of Motor Vehicles Tax in respect of the vehicles owned by Don Basco Middle School, Madras, for an educational tour of the students and staff of the school during the month of March, 1985.

3. Notification No. FRD 22 TMR 85 dated 23rd july, 1986, The Karnataka Motor Vehicles (Eight amendment) Rules, 1986.

On behalf of Sri Basavaraj patil Anwary, (Minister of State for Agriculture), I beg to lay;

Seventh Annual report of the Karnataka Agro industries Corporation Limited.

MR. SPEAKER.--All the papers and the reports are laid on the Table of the House.

ಸದಸ್ಯರ ಗೈರು ಹಾಜರಿಗೆ ಅನುಮತಿ

ಅಧ್ಯಕ್ಷರು.—ವಿಧಾನಸಭಾ ಸದಸ್ಯರಾದ ಶ್ರೀ ಜಿ. ಸಿ. ಮಂಜುನಾಥ್‌ರವರು ಅನಾರೋಗ್ಯದ ನಿಮಿತ್ತವಾಗಿ, ಸದರಿ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ. ಶ್ರೀ ಜಿ. ಸಿ. ಮಂಜುನಾಥ್‌ರವರಿಗೆ ಸದರಿ ವಿಧಾನಸಭಾ ಉಪವೇಶನಗಳಿಗೆ ಗೈರು ಹಾಜರಾಗುವುದಕ್ಕೆ ಅನುಮತಿ ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೆ ?

(ಯಾವ ಸದಸ್ಯರೂ ವಿರೋಧ ಪ್ರಕ್ತಪಡಿಸಲಿಲ್ಲ)

ಅಧ್ಯಕ್ಷರು.—ಗೈರು ಹಾಜರಾಗಲು ಶ್ರೀ ಜಿ.ಸಿ. ಮಂಜುನಾಥ್‌ರವರಿಗೆ ಅನುಮತಿ ನೀಡಲಾಗಿದೆ.

ನಿಲುವಳಿ ಸೂಚನೆ

(ಅನುಮತಿಗೆ ಮನವಿ)

ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯಿತಿಗಳ ಎಲ್ಲೆಯನ್ನು ಗೊತ್ತು ಮಾಡುವುದು

ಈಗ ಮಾನ್ಯ ಬಂಗಾರಪ್ಪನವರು, ಮಾನ್ಯ ಚೌಡಯ್ಯನವರು, ಮಾನ್ಯ ವೀರಪ್ಪಮೊಯಿಲಿಯವರು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ.....

ಅಧ್ಯಕ್ಷರು.—ವಿಷಯ ಹೇಳುತ್ತೇನೆ, ಸ್ವಲ್ಪ ದಯವಾಡಿ ಕುಳಿತುಕೊಳ್ಳಬೇಕು.

"ಜಿಲ್ಲಾಪರಿಷತ್ತು ಹಾಗೂ ಮಂಡಲ ಪಂಚಾಯತಿ ಸಂಬಂಧದಲ್ಲಿ ಸರಕಾರ ಕ್ಷೇತ್ರಗಳ ವಿಂಗಡಣೆ ಹಾಗೂ ಮಂಡಲ ಪಂಚಾಯಿತಿ ಕ್ಷೇತ್ರಗಳಿಗೆ ಮಿಸಲಿಡುವಾಗ ವಿಧಾನ ಪರಿಷತ್ತಿನಲ್ಲಿ ಸರಕಾರ ಕೊಟ್ಟ ಆಶ್ವಾಸನೆಗೆ ವಿರುದ್ಧವಾಗಿ ವಿರೋಧ ಪಕ್ಷದ ಜೊತೆಯಲ್ಲಿ ಸಮಾ

ಲೋಚನೆ ನಡೆಸುವ ನೆಪ ಹೇಳಿ ಕಡೆಗೆ ಏಕಪಕ್ಷೀಯವಾಗಿ ತೀರ್ಮಾನ ಮಾಡಿ ಯಾವುದೇ ನ್ಯಾಯ ಸಮ್ಮತ ಸೂತ್ರವನ್ನು ಅನುಸರಿಸದೆ ಸ್ವೇಚ್ಛಾಚಾರದಿಂದ ಹಾಗೂ ಕಾನೂನು ಬಾಹಿರವಾಗಿ ಆಳುವ ಜನತಾ ಪಕ್ಷದ ರಾಜಕೀಯ ಸಾಧನೆಯನ್ನೇ ಗುರಿಯಾಗಿಟ್ಟುಕೊಂಡು ದುರ್ಬಲ ಹಾಗೂ ಅಲ್ಪಸಂಖ್ಯಾತ ವರ್ಗಗಳ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಕಡೆಗಣಿಸಿ ಗ್ರಾಮಾಂತರ ಪ್ರದೇಶದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಬೇರೂರುವಂತೆ ರಾಜಕೀಯ ಪಿತೂರಿ ನಡೆಸಿರುವ ಬಗ್ಗೆ ಈ ಸೂಚನೆ ನೀಡಲಾಗಿದೆ.''

ಈಗ ಅಡ್ಮಿಸಿಬಿಲಿಟಿ ಬಗ್ಗೆ ಹೇಳಿ.

ಶ್ರೀ ಹೆಚ್.ಡಿ. ಚೌಡಯ್ಯ.—ಅಧ್ಯಕ್ಷರೆ,.....

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಇದರ ಬಗ್ಗೆ ನನ್ನದೊಂದು ಸಲಹೆ ಇದೆ. ಜಿಲ್ಲಾಪರಿಷತ್ತು ಹಾಗೂ ಮಂಡಲ ಪಂಚಾಯತ್ ವಿಚಾರದಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ಅಷ್ಟು ಸೂಕ್ತ ಅಲ್ಲ. ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕು ಅದನ್ನು ಒಪ್ಪುತ್ತೇನೆ. ಇದನ್ನು ಎರಡೂವರೆ ಗಂಟೆಯ ಕಾಲದ ಚರ್ಚೆಯಲ್ಲಿ ತೆಗೆದುಕೊಂಡರೆ ವಿವರ ಹೇಳಬಹುದು ಆದೇ ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ಆಗುವುದಿಲ್ಲ.

ಅಧ್ಯಕ್ಷರು.—ಹಾಗಾದರೆ ನಾಳೆ ತೆಗೆದುಕೊಳ್ಳೋಣವೇ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಅಧ್ಯಕ್ಷರೆ, ಎಲ್ಲಾ ಜಿಲ್ಲಾಧಿಕಾರಿಗಳು ಸಭೆ ಮಾಡಿದ್ದಾರೆ, ಅವರಿಂದ ವಿವರ ತರಿಸಬೇಕಾಗುತ್ತದೆ. ಆದ್ದರಿಂದ ಇದನ್ನು ಸೋಮವಾರ ತೆಗೆದುಕೊಳ್ಳಬೇಕು.

ಶ್ರೀ ಹೆಚ್.ಡಿ. ಚೌಡಯ್ಯ.—ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳು ಎಲ್ಲಾ ಜಿಲ್ಲಾಧಿಕಾರಿಗಳ ಸಭೆ ನಡೆಸಿರುತ್ತಾರೆ, ಪ್ರೊಸೀಡಿಂಗ್ಸ್ ಆಗಿರುತ್ತದೆ ಅದನ್ನು ತರಿಸಬೇಕೆಂದು ಹೇಳಿದರು ಅದಕ್ಕೆ ಪೂರ್ವ ಭಾವಿಯಾಗಿ ಚರ್ಚೆಮಾಡಬಹುದು.

ಅಧ್ಯಕ್ಷರು.—ರೂಲ್ ೬೮ರ ಪ್ರಕಾರ ಅವರು ಒಪ್ಪಿಕೊಂಡಿದ್ದಾರೆ, ಸೋಮವಾರ ೩ ಗಂಟೆಗೆ ಇದನ್ನು ಇಡೋಣ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಮಾನ್ಯ ಬೊಮ್ಮಾಯಿಯವರು ಹೇಳಿದ ಹಾಗೆ ಇದರ ಬಗ್ಗೆ ಚರ್ಚೆಗೆ ಬೇರೆ ನಿಯಮಾವಳಿಯಲ್ಲೇ ತೆಗೆದುಕೊಳ್ಳೋಣ. ನಾವು ಅರ್ಜೆಂಟ್ ಆಗಿ ಇದನ್ನು ತೆಗೆದುಕೊಳ್ಳಬೇಕೆಂದು ಏತಕ್ಕೆ ಹೇಳುತ್ತಿದ್ದೇವೆ ಎಂದರೆ, ಈಗಾಗಲೇ ಸರ್ಕಾರದಿಂದ ಅನೇಕ ಸುತ್ತೋಲೆಗಳನ್ನು ಕಳುಹಿಸಿದ್ದಾರೆ. ಆದ್ದರಿಂದ, ನಾಳೆ ಅಥವಾ ನಾಡಿದ್ದು ಇದನ್ನು ಏತಕ್ಕೆ ತೆಗೆದುಕೊಳ್ಳಬಾರದು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಅಧ್ಯಕ್ಷರೆ, ಜಿಲ್ಲಾಧಿಕಾರಿಗಳಿಂದ ವಿವರವನ್ನು ತರಿಸಬೇಕಾಗುತ್ತದೆ. ಆದ್ದರಿಂದ ಸೋಮವಾರ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಶುಕ್ರವಾರ ಬೂರಿಗೆ ಹೊಗತಕ್ಕ ಸದಸ್ಯರು ಹೋಗುತ್ತಾರೆ. ಆದ್ದರಿಂದ ಸೋಮವಾರ ಇಡೋಣ.

ಗಮನ ಸೆಳೆಯುವ ಸೂಚನೆ

ವಿದ್ಯುಚ್ಛಕ್ತಿ ಅಭಾವದಿಂದ ಅಲೆಂಬಿಕ್ ಗಾಜಿನ ಕಾರ್ಖಾನೆಯನ್ನು ಮುಚ್ಚಿರುವುದು

ಶ್ರೀ ಎಂ ಎಸ್. ಕೃಷ್ಣನ್.—ಅಲೆಂಬಿಕ್ ಗಾಜಿನ ಕಾರ್ಖಾನೆಯನ್ನು ಮುಚ್ಚಿರುವ ಬಗ್ಗೆ ಕಾರ್ಮಿಕ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ರೆವಿನ್ಯೂ ಹಾಗೂ ಕಾರ್ಮಿಕ ಮಂತ್ರಿಗಳು).—ತೀವ್ರ ವಿದ್ಯುಚ್ಛಕ್ತಿ ಅಭಾವದ ಪ್ರಯುಕ್ತ ದಿನಾಂಕ ೧೫-೧೧-೧೯೮೪ರಿಂದ ಅಲೆಂಬಿಕ್ ಗ್ಲಾಸ್‌ವರ್ಕಾ ಕಾರ್ಖಾನೆಯು